**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು-ಮಡಿಕೇರಿ**

**<u>ಎಸ್.ಸಿ ಸಂಖ್ಯೆಃ 23/2023</u>**

ಪ್ರಾಸಾಃ 15
ಚಾಸಾಃ 21

| | | |
|---|---|---|
| ಸಾಕ್ಷಿದಾರರ ಹೆಸರು: | | ತಮ್ಮಯ್ಯ |
| ತಂದೆಯ ಹೆಸರು | : | ಲೇಟ್ ಎನ್ ತಮ್ಮಯ್ಯ |
| ವಯಸ್ಸು | : | 55 ವರ್ಷ |
| ವೃತ್ತಿ | : | ಪಿ.ಎಸ್.ಐ, ಮಡಿಕೇರಿ ಟ್ರಾಫಿಕ್ ಪೊಲೀಸ್ ಠಾಣೆ |
| ವಾಸ | : | ಮಡಿಕೇರಿ. |

**ಸಾಕ್ಷಿಯನ್ನು ದಿನಾಂಕ 21-02-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ನಾನು 2019 ರಿಂದ 2023 ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿದ್ದೆ.

2. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ದಿನಾಂಕ 08-10-2022 ರಂದು ಆರೋಪಿಗಳನ್ನುಪತ್ತೆ ಹಚ್ಚಲು ನನ್ನನ್ನು, ಚಾಸಾ-17, ಪ್ರಾಸಾ-13 ರವರನ್ನು ನೇಮಿಸಿದ್ದು, ಪೊಲೀಸ್ ಬಾತ್ಮೀದಾರರಿಂದ ಆರೋಪಿಗಳು ದಕ್ಷಿಣ ಕನ್ನಡ ಜಿಲ್ಲೆಯ ವಿಠ್ಲದಲ್ಲಿ ಇರುವುದಾಗಿ ಸಿಕ್ಕಿದ ಖಚಿತ ವರ್ತಮಾನದ ಮೇರೆಗೆ ನಾವು ದಿನಾಂಕ 09-10-2022 ರಂದು ಬೆಳಿಗ್ಗೆ ಸಮಯ 5.00 ಗಂಟೆಗೆ ವಿಠ್ಲ ಬಸ್ ನಿಲ್ದಾಣದಲ್ಲಿ ಇರುವಾಗ

ಎದುರುಗಡೆಯಿಂದ 1 ಹಾಗೂ 3ನೇ ಅರೋಪಿಗಳು ಬರುತಿದ್ದು, ಅವರನ್ನು ವಶಕ್ಕೆ ಪಡೆದುಕೊಂಡು ಮುಂದಿನ ಕ್ರಮದ ಬಗ್ಗೆ ಸಿದ್ದಾಪುರ ಪೊಲೀಸ್ ಠಾಣೆಗೆ 8.00 ಗಂಟೆಗೆ ತಲುಪಿ, ವರದಿಯೊಂದಿಗೆ ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇನೆ. ಈಗ ನಾನು ನೋಡುತ್ತಿರುವ ವರದಿ ನಾನು ನೀಡಿದ ವರದಿ ಆಗಿದ್ದು, ಅದನ್ನು ನಿಪಿ-16 ಎಂದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

3. ದಿನಾಂಕ 05-11-2022 ರಂದು ಈ ಪ್ರಕರಣದ 2ನೇ ಆರೋಪಿ ರವೀಂದ್ರ ಅಲಿಯಾಸ್ ಅಪ್ಪು ರವರು ನ್ಯಾಯಾಲಯದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿ ಅವರ ಸ್ವ-ಇಚ್ಛಾ ಹೇಳಿಕೆಯಲ್ಲಿ ಕೃತ್ಯದ ದಿನದಂದು ತಾನು ಧರಿಸಿದ್ದ ಬಟ್ಟೆಗಳನ್ನು ತನ್ನ ವಾಸದ ಮನೆಯ ಕಾಂಪೌಂಡಿನ ಪಕ್ಕದ ಕಾಫಿತೋಟದಲ್ಲಿ ಇರುವ ಪಾನುವಾಳದ ಮರದಲ್ಲಿ ಇಟ್ಟಿರುವುದಾಗಿ ಹೇಳಿದ್ದರಿಂದ ಸದರಿ ಬಟ್ಟೆಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ತನಿಖಾಧಿಕಾರಿಗಳು ನನ್ನನ್ನು , ಚಾಸಾ-16 ಹಾಗೂ ಚಾಸಾ-20 ರವರನ್ನು ಸ್ಥ,ಳಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿಗೆ ಪಂಚರನ್ನು ಬರಮಾಡಿಕೊಂಡು ಆರೋಪಿಯು ತೋರಿಸಿದ ಸ್ಥಳದಲ್ಲಿ ಹುಡುಕಲಾಗಿ ಯಾವುದೇ ಬಟ್ಟೆಗಳು ಪತ್ತೆಯಾಗಿರುವುದಿಲ್ಲ. ತನಿಖಾಧಿಕಾರಿಗಳ ಆದೇಶದಂತೆ ನಾನು ಆ ದಿನ ವಿಡಿಯೋ ಹಾಗೂ ಫೋಟೊಗಳನ್ನು ತೆಗೆದಿರುತ್ತೇನೆ. ಸದರಿ ದಿನಾಂಕದಂದು ಜರುಗಿಸಿದ್ದ ನಿಪಿ-11 ರ ಮಹಜರ್ಗೆ ನಾನು ಸಹಿ ಹಾಕಿದ್ದು, ಅದನ್ನು

ನಿಪಿ-11(ಸಿ) ಎಂದು ಗುರುತಿಸಲಾಯಿತು. ನಾನು ತೆಗೆದ ಫೋಟೊಗಳು ನಿಪಿ-12 ಆಗಿರುತ್ತವೆ. ನಾನು ವಶಕ್ಕೆ ಪಡೆದ ಆರೋಪಿಗಳು ನ್ಯಾಯಾಲಯದಲ್ಲಿ ಉಪಸ್ಥಿತರಿದ್ದು ಸಾಕ್ಷಿ ಅವರನ್ನು ಗುರುತಿಸಿರುತ್ತಾರೆ. 2 ನೇ ಆರೋಪಿ ರವೀಂದ್ರ ಈ ದಿನ ನ್ಯಾಯಾಲಯದಲ್ಲಿ ಗೈರುಹಾಜರಾಗಿದ್ದು, ಅವರನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿದ ಕಾರಣ ಗುರುತಿಸಲಾಗಿದೆ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀಸವಾಲು- 1 ರಿಂದ 3 ನೇ ಆರೋಪಿತರ ಪರವಾಗಿ ಶ್ರೀ ಪಿ.ಕೆ.ಎಂ., ವಕೀಲರಿಂದಃ</u>**

4. ಆರೋಪಿಗಳನ್ನು ಪತ್ತೆ ಹಚ್ಚಲು ತನಿಖಾಧಿಕಾರಿಗಳು ಫೋಟೊಗಳನ್ನು ನೀಡಿದ್ದಾರಾ ಎಂದರೆ ಸಾಕ್ಷಿ ಆರೋಪಿಗಳನ್ನು ನನಗೆ ಈ ಮೊದಲೇ ಪರಿಚಯ ಇತ್ತು ಎಂದು ನುಡಿಯುತ್ತಾರೆ. ಆರೋಪಿಗಳನ್ನು ಪತ್ತೆ ಹಚ್ಚಲು ನಾನು ನನ್ನ ಕಾರಿನಲ್ಲೇ ವಿಟ್ಲಕ್ಕೆ ಹೋಗಿದ್ದೆ. ದಿನಾಂಕ 08-10-2022 ರಂದು ರಾತ್ರಿ 10.00 ಗಂಟೆಗೆ ನಾವು ಸಿದ್ದಾಪುರ ಠಾಣೆಯಿಂದ ಹೊರಟಿದ್ದೆವು. ಬೆಳಗ್ಗಿನ ಜಾವ 3.00 ರಿಂದ 4.00 ಗಂಟೆಗೆ ನಾವು ವಿಟ್ಲ ತಲುಪಿದ್ದೆವು. ವಿಟ್ಲ ಬಸ್ ನಿಲ್ದಾಣಕ್ಕೆ ಆರೋಪಿಗಳು ಬರುತ್ತಾರೆ ಎಂದು ನಮಗೆ ಬಾತ್ಮೀದಾರರು ತಿಳಿಸಿದ್ದರು. ಪುತ್ತೂರಿನಿಂದ ವಿಟ್ಲ ಬಸ್ ನಿಲ್ದಾಣಕ್ಕೆ ಯಾವ ಬಸ್ಸಿನಲ್ಲಿ ನಾವು ಹೋಗಿದ್ದೆವು ಎಂದು ನನಗೆ ಗೊತ್ತಿಲ್ಲ. ಸ್ಥಳೀಯ ಪೊಲೀಸರಿಗೆ ನಾವು ಈ ಬಗ್ಗೆ ಮಾಹಿತಿ ನೀಡಿರಲಿಲ್ಲ. ವಿಟ್ಲ ಬಸ್ ನಿಲ್ದಾಣಕ್ಕೆ ಆರೋಪಿಗಳು ಪುತ್ತೂರು ಕಡೆಯಿಂದ ಬರುವ ರಸ್ತೆಯಲ್ಲಿ ನಡೆದುಕೊಂಡು ಬರುತಿದ್ದರು. ನಾವು ಬಸ್ ನಿಲ್ದಾಣಕ್ಕೆ ಬಂದ

ನಂತರವೇ ಆರೋಪಿಗಳು ಅಲ್ಲಿಗೆ ಬಂದಿದ್ದಾರೆ. ಆರೋಪಿಗಳನ್ನು ನಾವು ದೂರದಿಂದ ನೋಡಿದ್ದು, ನಮ್ಮ ಪಕ್ಕಕ್ಕೆ ಬಂದ ನಂತರ ಅವರನ್ನು ವಶಕ್ಕೆ ಪಡೆದುಕೊಂಡಿದ್ದೇವೆ. ವಿಠ್ಲ ಬಸ್ ನಿಲ್ದಾಣದಲ್ಲಿ ನಾವು ನಿಂತುಕೊಂಡಿದ್ದೇವೆ ಎಂದು ಹೇಳುವ ಸ್ಥಳದಲ್ಲಿ ವಿದ್ಯುತ್ ಚ್ಛಕ್ತಿ ಇದ್ದು, ಬೀದಿ ದೀಪಗಳು ಇವೆ. ದಿನಾಂಕ 08-10-2023 ರಂದು ರಾತ್ರಿ 10.00 ಗಂಟೆಗೆ ನಮಗೆ ಆರೋಪಿಗಳು ವಿಠ್ಲ ಬಸ್ ನಿಲ್ದಾಣಕ್ಕೆ ಬರುತ್ತಾರೆ ಎಂದು ಮಾಹಿತಿ ಇತ್ತು. ಮಾಹಿತಿ ಸಿಕ್ಕ ತಕ್ಷಣ ನಾವು ಠಾಣೆಯಿಂದ ಹೊರಟೆವು. ನಾವು ಆ ದಿನ ಮಫ್ತಿಯಲ್ಲಿ ಇದ್ದೆವು. ಆ ಸಂದರ್ಭದಲ್ಲಿ ನಾನು ಸಿದ್ದಾಪುರ ವಸತಿ ಗೃಹದಲ್ಲಿ ಇದ್ದೆ. ಬೆಳಿಗ್ಗೆ 8.00 ಗಂಟೆಗೆ ನಾವು ಠಾಣೆಗೆ ಬಂದೆವು. ನಾನು 1 ಹಾಗೂ 3 ನೇ ಆರೋಪಿಗಳನ್ನು ವಿಠ್ಲ ಬಸ್ ನಿಲ್ದಾಣದಲ್ಲಿ ವಶಕ್ಕೆ ಪಡೆದುಕೊಂಡಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. 1 ಹಾಗೂ 3 ನೇ ಆರೋಪಿಗಳನ್ನು ವಿಚಾರಣೆಗಾಗಿ ಠಾಣೆಗೆ ಕರೆಯಿಸಿದ್ದು, ಆ ಸಂದರ್ಭದಲ್ಲಿ ಅವರನ್ನು ದಸ್ತಗಿರಿ ಮಾಡಿದ್ದೇವೆ ಎಂದರೆ ಸರಿಯಲ್ಲ.

5. ದಿನಾಂಕ 05-11-2022 ರಂದು 2 ನೇ ಆರೋಪಿ ತನಿಖಾಧಿಕಾರಿಗಳ ಎದುರು ಯಾವುದೇ ಸ್ವ-ಇಚ್ಚಾ ಹೇಳಿಕೆಯನ್ನು ನೀಡಿಲ್ಲ ಮತ್ತು ಸ್ವ-ಇಚ್ಚಾ ಹೇಳಿಕೆಯ ಆಧಾರದಲ್ಲಿ ಅವರ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಳ್ಳಲು ಆರೋಪಿಯ ಜೊತೆಗೆ ಹೋಗಿ ನಿಪಿ-11 ರಂತೆ ಮಹಜರ್ ತಯಾರಿಸಿದ್ದೇವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಇಲಾಖಾ ಕ್ಯಾಮರದಲ್ಲಿ ಫೋಟೊಗಳನ್ನು ಹಾಗೂ ವಿಡಿಯೋಗಳನ್ನು

ತೆಗೆಯಬಹುದು. ನಿಪಿ-12 ರಂತೆ ಫೋಟೋಗಳನ್ನು ತೆಗೆದಿದ್ದೇನೆ ಮತ್ತು ವಿಡಿಯೋಗಳನ್ನು ಮಾಡಿದ್ದೇನೆ ಎಂದು ಹೇಳುವುದು ಸುಳ್ಳು ಮತ್ತು ಅದು 2 ನೇ ಆರೋಪಿಯ ಮನೆಯ ಹತ್ತಿರ ತೆಗೆದ ಫೋಟೋಗಳು ಅಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಪೂರಕವಾಗಲೀ ಎಂದು ನಿಪಿ-16 ರಂತೆ ಒಂದು ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ